"ಐದು ದಿನಗಳ ಹಿಂದೆ, ನನಗೆ ಅವನು ಪಾರ್ಕ್‌ನಲ್ಲಿ ಸಿಕ್ಕಿದ. ಯಾರೋ ಬಡವ ಇರಬೇಕೆಂದು ಅವನಿಗೆ ಊಟ ಕೊಡಿಸಿದೆ. ತಾನು ಒರಿಸ್ಸಾದಿಂದ ಬಂದವನು, ಬೆಂಗಳೂರಿನಲ್ಲಿ ಯಾವುದಾದರೂ ಕೆಲಸ ಬೇಕಿತ್ತು ಅಂತ ಕೇಳಿದ. ನಾನೂ ಬಾಯಿ ತಪ್ಪಿ ನನಗೆ ಒಬ್ಬ ಕುಕ್ ಬೇಕಿತ್ತು ಅಂದೆ ಅಷ್ಟೇ. ತಾನೂ ಒಬ್ಬ ಎಕ್ಸ್‌ಪರ್ಟ್ ಅಡುಗೆಯವನು ತನ್ನನ್ನೇ ತೆಗೆದುಕೊಳ್ಳಿ ಅಂತ ಹಿಂದೆ ಬಿದ್ದ. ನಾನೆಷ್ಟೇ ಬೇಡ ಅಂದರೂ ಕೇಳಲಿಲ್ಲ. ನಾಲ್ಕುದಿನ ನನ್ನ ಕೈರುಚಿ ನೋಡಿ ಆಮೇಲೆ ಬೇಡಾ ಅಂದರೆ ಹೋಗ್ತೀನಿ ಅಂದ. ಅದೇನು ಅನಿಸಿತೋ ನಾನೂ ಹೂ ಅಂದುಬಿಟ್ಟೆ."

"ಇರೋದು ನೀವಿಬ್ಬರೇ... ಇಷ್ಟು ವರ್ಷದಲ್ಲಿ ಅಕ್ಕಪಕ್ಕದವರನ್ನೂ ಸೇರಿಸಿಕೊಳ್ಳದವರು ನೀವು... ನಿಮಗೆ ಅಡುಗೆಯವನ ಅವಶ್ಯಕತೆ ಯಾಕೆ ಬೇಕಿತ್ತು?"

ಮತ್ತೆ ಗಂಡಹೆಂಡತಿ ಮುಖ ಮುಖ ನೋಡಿಕೊಂಡರು.

"ಹೇಳಿ ಅದೇನಿದ್ದರೂ... ನಮ್ಮ ಅನುಮಾನದ ಪ್ರಕಾರ, ಅವರು ನಿಮ್ಮನ್ನು ಕೊಲ್ಲಲು ಬಂದಿರಬೇಕು... ಮಧ್ಯದಲ್ಲಿ ನಿಮ್ಮ ಅಡುಗೆಯವ ಸಿಕ್ಕಿಕೊಂಡ."

"ಸರ್ ನನಗೇನೋ ಇದು ರಾಬರಿಯ ಕೇಸ್ ಅನಿಸುತ್ತಿದೆ. ಕೊಲೆ ಮಾಡುವುದಾಗಿದ್ದರೆ ನನ್ನನ್ನೂ ಮಾಡಲು ಅವರಿಗೆ ಸಾಧ್ಯ ಇತ್ತು. ನಮ್ಮನ್ನು ಹೆದರಿಸಿ ಹಣ ಒಡವೆ ಕದ್ದೊಯಲು ಪ್ಲಾನ್ ಮಾಡಿ ಬಂದಿದ್ದಾರೆ ಅನಿಸುತ್ತಿದೆ ನನಗೆ."

"ಇರಬಹುದು... ನಿಮ್ಮ ಅಡುಗೆಯವನು ಮತ್ತು ಆ ರಾಬರಿ ಮಾಡಲು ಬಂದಿರುವವರು ಸೇರಿ ಪ್ಲಾನ್ ಮಾಡಿದ್ದಾರೆ. ಏನೋ ಜಗಳವಾಗಿ ಅವನನ್ನು ಕೊಲೆ ಮಾಡಿರಬಹುದು ಅಲ್ಲವಾ?"

"ಸಾಧ್ಯತೆ ಇದೆ ಸರ್... ಆದರೆ ಒಂದು ವಿಷಯ, ನಾವು ಅವನ ಡೀಟೈಲ್ಸ್ ಅನ್ನು ಪೊಲೀಸಿಗೆ ವೆರಿಫಿಕೆಶನ್‌ಗೆ ಕೊಡಬೇಕು ಅಂದಾಗ ಯಾವುದೇ ಭಯ ಇಲ್ಲದೇ ನೀಡಿದ್ದ. ಅದು ನೋಡಿದರೆ ಅವನ ಬಗ್ಗೆ ಅನುಮಾನ ಬರುವುದಿಲ್ಲ. ನನಗೇನೋ ಇದೆಲ್ಲಾ ಆ ಜಯರಾಂ ಮಾಡಿಸಿರುವ ಕೆಲಸ ಅಂತಾನೆ ಅನಿಸುತ್ತದೆ ಸರ್."

> ರಾಬರಿ ಮಾಡುವುದಕ್ಕೆ ಬಂದು ಕೊಲೆ ಮಾಡಿರೋದಾ, ಅಥವಾ ಮಾಡಿರುವ ಕೊಲೆ ಮುಚ್ಚಿ ಹಾಕೋಕ್ಕೆ ರಾಬರಿ ಅನ್ನೋ ನಾಟಕವೇ? ಯಾವುದೇ ಕೃಂಗೆ ಒಂದು ಮೋಟಿವ್ ಇರುತ್ತದೆ. ಅದೇ ಕೇಸನ್ನು ಮುಂದುವರೆಸಯಲು ಸಹಾಯ ಮಾಡೋದು. ಇಲ್ಲಿ ಅದೇ ಎಸ್ಟಾಬ್ಲಿಶ್ ಆಗ್ತಾ ಇಲ್ಲ...

ಅಮಾಯಕನಂತೆ ಕಾಣುತ್ತಿದ್ದ ನಿರ್ಮಲ್ ಅಷ್ಟು ತರ್ಕಬದ್ಧದವಾಗಿ ಮಾತಾಡುತ್ತಾನೆ ಅಂತ ಎಣಿಸಿರಲಿಲ್ಲ ಧನಂಜಯ. "ಹಾ, ನೀವು ಕೇಳಿದ ಪ್ರಶ್ನೆ, ನಿಮಗೆ ಕುಕ್ ಯಾಕೆ ಬೇಕಿತ್ತು ಅಂತಾ ಅಲ್ಲವಾ..."

"ನಮಗೆ ಮಕ್ಕಳಿಲ್ಲ ಅಂತಾ IVF ಮಾಡಿಸೋಣ ಅಂತಾ ಇದ್ದೆವು. ಹಾಗೇನಾದರೂ ಆದರೆ, ಇವಳು ಎದ್ದು ಓಡಾಡುವಂತಿಲ್ಲ; ಹಾಗಾಗಿ ಒಬ್ಬ ಅಡುಗೆಯವರು ಬೇಕಿತ್ತು ಅಷ್ಟೇ."

ಧನಂಜಯನಿಗೆ ನಿರ್ಮಲ್‌ನನ್ನು ಕೇಳಲು ಯಾವ ಪ್ರಶ್ನೆಯೂ ಉಳಿದಿರಲಿಲ್ಲ. ಆದರೆ ಉತ್ತರವಿಲ್ಲದ